ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

(ಗೊಂದಲ)

ಅಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರ ಪ್ರಶ್ನೆಯೂ ಇದೆ.

(ಗೊಂದಲ)

ಅಧ್ಯಕ್ಷರು : ಮಾನ್ಯ ಕಮರುಲ್ ಇಸ್ಲಾಂರವರು ತಮ್ಮ ಪ್ರಶ್ನೆಯನ್ನು ಕೇಳಬೇಕು.

SRI QAMARUL ISLAM : I am not having answers, It is not supplied to me. You have not supplied to me the answers.

ಅಧ್ಯಕ್ಷರು : ಉತ್ತರವನ್ನೇ ಕೊಟ್ಟಿಲ್ಲ ಎಂದು ಹೇಳುತ್ತಾರೆ ನೋಡಿ, ಮಾನ್ಯ ರಾಮಲಿಂಗಾರೆಡ್ಡಿಯವರಿಗೆ ಕೊಟ್ಟಿದ್ದಾರೆಯೇ? ಯಾರಿಗೂ ಬಂದಿಲ್ಲವೇ? ಉತ್ತರವನ್ನು ಕೊಡದಿದ್ದರೆ ಇನ್ನೊಂದು ಹತ್ತು ನಿಮಿಷ ಬಿಟ್ಟೇ ಸಭೆ ಸೇರಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸಭೆ ಸೇರುವುದಕ್ಕೆ ಮುಂಚೆ ಒಂದು ಹತ್ತು ನಿಮಿಷ ಮುಂಚೆ ಕೊಟ್ಟರೆ ಓದಿಕೊಂಡು ಏನು ಸಪ್ಲಿಮೆಂಟರಿ ಕೇಳಬೇಕೋ ಅದನ್ನು ಕೇಳಬಹುದು. ಇಲ್ಲದಿದ್ದರೆ ಸಪ್ಲಿಮೆಂಟರಿಯನ್ನು ಕೇಳುವುದಕ್ಕೆ ಆಗುವುದಿಲ್ಲ.

ಅಧ್ಯಕ್ಷರು : ರಾಮಲಿಂಗಾರೆಡ್ಡಿಯವರಿಗೆ ರಿಪ್ಲೈಯನ್ನು ಕೊಟ್ಟಿದ್ದಾರೆಯೇ?

ಶ್ರೀ ರಾಮಲಿಂಗಾರೆಡ್ಡಿ : ಕೊಟ್ಟಿದ್ದಾರೆ.

ಅಧ್ಯಕ್ಷರು : ಶಿವಾನಂದ ಪಾಟೀಲ್ ತಮಗೆ ಉತ್ತರ ಬಂದಿದೆಯೇ?

ಶ್ರೀ ವಾಟಾಳ್ ನಾಗರಾಜ್ : ನನಗೆ ಬಂದಿದೆ.

ಅಧ್ಯಕ್ಷರು : ನೀವು ಪ್ರಶ್ನೆ ಕೇಳಿ.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

ಕರ್ನಾಟಕದಲ್ಲಿನ ರಾಷ್ಟ್ರೀಯ ಉದ್ಯಾನವನ

26 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯದಲ್ಲಿರುವ ಅರಣ್ಯ ಪ್ರದೇಶಗಳೆಷ್ಟು ಹಾಗೂ ರಾಷ್ಟ್ರೀಯ ಉದ್ಯಾನವನಗಳೆಷ್ಟು?

ಆ) ಕರ್ನಾಟಕ ರಾಜ್ಯದಲ್ಲಿರುವ ಹುಲಿಗಳ ಒಟ್ಟು ಸಂಖ್ಯೆ ಹಾಗೂ ಅವು ಯಾವ ಯಾವ ಅರಣ್ಯ ಪ್ರದೇಶಗಳಲ್ಲಿ ಎಷ್ಟೆಷ್ಟು ಇವೆ?

ಇ) ವನ್ಯ ಮೃಗಗಳ ರಕ್ಷಣೆಗೆ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಈ) ಕರ್ನಾಟಕ ರಾಜ್ಯದಲ್ಲಿರುವ ಮೃಗಾಲಯಗಳೆಷ್ಟು ಹಾಗೂ ಅವುಗಳಲ್ಲಿರುವ ಪ್ರಾಣಿಗಳ ಒಟ್ಟು ಸಂಖ್ಯೆ ಎಷ್ಟು ಮತ್ತು ಯಾವ ಯಾವ ಪ್ರಾಣಿಗಳಿವೆ?

ಉ) ಮೈಸೂರಿನ ಮೃಗಾಲಯದಲ್ಲಿ ಹುಲಿಗಳು ಸೇರಿದಂತೆ ಹಲವಾರು ಪ್ರಾಣಿಗಳು ಸಾವಿಗೀಡಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಊ) ಹಾಗಿದ್ದಲ್ಲಿ, ಅವುಗಳ ಸಂಖ್ಯೆ ಎಷ್ಟು?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಅರಣ್ಯ ಪ್ರದೇಶ : 38645.54 ಚ.ಕಿ.ಮೀ.

ರಾಷ್ಟ್ರೀಯ ಉದ್ಯಾನವನಗಳು - 5 (ಐದು)

ಆ) ಹುಲಿಗಳ ಒಟ್ಟು ಸಂಖ್ಯೆ 305 (1993ರ ಗಣತಿ ಪ್ರಕಾರ) ಯಾವ ಯಾವ ಅರಣ್ಯ ಪ್ರದೇಶಗಳಲ್ಲಿ ಎಷ್ಟೆಷ್ಟು ಇವೆ, ಎಂಬ ವಿವರಗಳನ್ನು ಲಗತ್ತಿಸಿರುವ ಪಟ್ಟಿಯಲ್ಲಿ ವಿವರಿಸಿದೆ.

ಇ) ವನ್ಯಜೀವಿ ಸಂರಕ್ಷಣೆಗಾಗಿ ಪ್ರತ್ಯೇಕ ಘಟಕ ಸ್ಥಾಪನೆ ಪ್ರಾಣಿಗಳ ಹಾಗೂ ಅವುಗಳ ಆವಾಸ ಸ್ಥಾನದ ರಕ್ಷಣೆಗಾಗಿ ಬೆಂಕಿ ರಕ್ಷಣೆ ಕಾರ್ಯಕ್ರಮ, ಸಿಬ್ಬಂದಿಗೆ ವೇಗ ವಾಹನಗಳು ಮದ್ದು ಗುಂಡುಗಳು ನಿಸ್ತಂತು ಉಪಕರಣ, ವಾಕಿಟಾಕಿ ಒದಗಿಸುವಿಕೆ, ಸೂಕ್ಷ್ಮ ಪ್ರದೇಶಗಳಲ್ಲಿ ಗಸ್ತು ತಿರುಗುವುದನ್ನು ಹೆಚ್ಚಿಸುವಿಕೆ, ವನ್ಯಪ್ರಾಣಿಗಳ ಬೇಟೆಯನ್ನು ಸಂಪೂರ್ಣ ನಿಷೇಧಿಸುವಿಕೆ, ವನ್ಯಪ್ರಾಣಿ ಸಂರಕ್ಷಣಾ ಕಾಯ್ದೆ 1972ರ ಕಡ್ಡಾಯ ಅನುಷ್ಠಾನ, ಇಂತಹ ಕ್ರಮಗಳನ್ನು ಕೈಗೊಳ್ಳಲಾಗಿದೆ.

ಈ) 23 ಮೃಗಾಲಯಗಳಿವೆ.

ಒಟ್ಟು 3082 ವಿವಿಧ ಪ್ರಾಣಿಗಳು ಇವೆ (ಮೈಸೂರು ಮೃಗಾಲಯದಲ್ಲಿ ಒಟ್ಟು 929 ಮೃಗಗಳಿವೆ)

ಪ್ರಾಣಿಗಳ ವಿವರ :	ಸಸ್ತನಿಗಳು	1513
	ಪಕ್ಷಿಗಳು	1334
	ಸರೀಸೃಪಗಳು	235

ಉ) ಬಂದಿದೆ.

ಊ)

ವರ್ಷ	ಸಸ್ತನಿಗಳು	ಪಕ್ಷಿಗಳು	ಸರೀಸೃಪಗಳು
1992-93	35	8	3
1993-94	34	13	14
1994-95	24	13	8

ಹುಲಿಗಳ ಗಣತಿ ವಿವರಗಳು

ಕ್ರಮ ಸಂಖ್ಯೆ	ರಾಷ್ಟ್ರೀಯ ಉದ್ಯಾನವನ: ಅಭಯಾರಣ್ಯ ವಿಭಾಗಗಳ ಹೆಸರುಗಳು	ಸಂಖ್ಯೆ
1)	ಬಂಡೀಪುರ ರಾಷ್ಟ್ರೀಯ ಉದ್ಯಾನವನ	66
2)	ನಾಗರಹೊಳೆ ರಾಷ್ಟ್ರೀಯ ಉದ್ಯಾನವನ	53
3)	ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ	-
4)	ಬಿ.ಆರ್.ಟಿ. ಅಭಯಾರಣ್ಯ	12
5)	ದಾಂಡೇಲಿ ವನ್ಯಪ್ರಾಣಿ ಅಭಯಾರಣ್ಯ	11
6)	ಕುದುರೇಮುಖ್ ರಾಷ್ಟ್ರೀಯ ಉದ್ಯಾನವನ	2
7)	ಭದ್ರ ವನ್ಯಪ್ರಾಣಿ ಅಭಯಾರಣ್ಯ	21
8)	ಕಾವೇರಿ ವನ್ಯಪ್ರಾಣಿ ಅಭಯಾರಣ್ಯ	2
9)	ತಲಕಾವೇರಿ ವನ್ಯಪ್ರಾಣಿ ಅಭಯಾರಣ್ಯ	3
10)	ಶಿವಮೊಗ್ಗ ವಿಭಾಗ	13
11)	ಚಿಕ್ಕಮಗಳೂರು ವಿಭಾಗ	9
12)	ಕೊಪ್ಪ ವಿಭಾಗ	11

13)	ಭದ್ರಾವತಿ ವಿಭಾಗ	8
14)	ಸಾಗರ್ ವಿಭಾಗ	12
15)	ಗುಲಬರ್ಗಾ ವಿಭಾಗ	-
16)	ಚಿತ್ರದುರ್ಗ ವಿಭಾಗ	-
17)	ರಾಯಚೂರು ವಿಭಾಗ	-
18)	ಬಳ್ಳಾರಿ ವಿಭಾಗ	-
19)	ಹಾಸನ್ ವಿಭಾಗ	7
20)	ಮಂಡ್ಯ ವಿಭಾಗ	-
21)	ಮೈಸೂರು ಪಶ್ಚಿಮ ವಿಭಾಗ, ಹುಣಸೂರು	2
22)	ಕೊಳ್ಳೇಗಾಲ ವಿಭಾಗ	6
23)	ಮೈಸೂರು ವಿಭಾಗ	1
24)	ಬೆಂಗಳೂರು ಗ್ರಾಮಾಂತರ ವಿಭಾಗ	1
25)	ತುಮಕೂರು ವಿಭಾಗ	-
26)	ಧಾರವಾಡ ವಿಭಾಗ	-
27)	ಬೆಳಗಾಂ ವಿಭಾಗ	2
28)	ಮಂಗಳೂರು ವಿಭಾಗ	3
29)	ಮಡಿಕೇರಿ ವಿಭಾಗ	8
30)	ಕುಂದಾಪುರ ವಿಭಾಗ	10
31)	ವಿರಾಜಪೇಟೆ ವಿಭಾಗ	6
32)	ಹೊನ್ನಾವರ ವಿಭಾಗ	11
33)	ಯಲ್ಲಾಪುರ ವಿಭಾಗ	7
34)	ಶಿರಸಿ ವಿಭಾಗ	7
35)	ಹಳಿಯಾಳ ವಿಭಾಗ	6
36)	ಕಾರವಾರ ವಿಭಾಗ	6
	ಒಟ್ಟು	305

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರನ್ನು ನಾನು ಕೇಳತಕ್ಕಂಥ ವಿಚಾರದಲ್ಲಿ ಒಂದನೆಯದು, ಮೈಸೂರು ಮೃಗಾಲಯದಲ್ಲಿ ಇತ್ತೀಚೆಗೆ ಪ್ರಾಣಿಗಳು ಸಾಯುತ್ತಿರತಕ್ಕಂಥದ್ದು ಜಾಸ್ತಿಯಾಗಿದೆ. ಅದರಲ್ಲಿ ಹುಲಿಗಳು, ಕತ್ತೆ ಕಿರುಬ ಈ ರೀತಿ ಪ್ರಾಣಿಗಳು ಸಾಯುತ್ತಿವೆ. ಈ ರೀತಿ ಪ್ರಾಣಿಗಳು ಸಾಯುವುದಕ್ಕೆ ಕಾರಣಗಳೇನು? ಈ ರೀತಿ ಸತ್ತಿರುವ ಬಗ್ಗೆ ಏನಾದರೂ ಸರ್ಕಾರ ತನಿಖೆ ನಡೆಸಿದೆಯೇ? ಮತ್ತು ಈಗ ಈ ತನಿಖೆಗೆ ಆಜ್ಞೆ ಮಾಡಿದ್ದೀರಾ? ಇದೇ ರೀತಿ ಹಿಂದೆ ಹುಲಿಗಳು ಇತರ ಪ್ರಾಣಿಗಳು ಸತ್ತಿರುವ ಬಗ್ಗೆ ಯಾವುದಾದರೂ ಒಂದು ತನಿಖೆಯನ್ನು ನಡೆಸುವುದಕ್ಕೆ ಒಂದು ಸಮಿತಿಯನ್ನು ನೇಮಕ ಮಾಡಿತ್ತೇ? ಮೊನ್ನೆ ನಾನು ಪತ್ರಿಕೆಯಲ್ಲಿ ನೋಡಿದೆ. ತಾವು ಮೃಗಾಲಯಕ್ಕೆ ಹೋಗಿ ಬಂದಿದ್ದೀರಿ ಎಂದು. ಆ ರೀತಿ ಹೋಗಿ ಬಂದಿದ್ದರೆ ನೀವು ತೆಗೆದುಕೊಂಡಿರುವ ಕ್ರಮವೇನು? ಇದರ ಜೊತೆಗೆ ಎರಡು ಹೆಬ್ಬಾವುಗಳು ತಪ್ಪಿಸಿಕೊಂಡು ಹೋಗಿವೆ. ಈ ಎರಡು ಹೆಬ್ಬಾವುಗಳನ್ನು

ಹಿಡಿಯುವುದಕ್ಕೆ ಸರ್ಕಾರದಲ್ಲಿ ಶಕ್ತಿ ಇಲ್ಲ. ಎಲ್ಲ ಕಡೆಗೂ ಪೋಲೀಸ್‌ಗೆ ಹೇಳಿದ್ದಾರೆ, ಅರಣ್ಯ ಇಲಾಖೆಗೆ ಹೇಳಿದ್ದಾರೆ, ಎಲ್ಲಾ ಕಡೆಗೆ ಹೇಳಿದ್ದಾರೆ. ಆದರೂ ಹೆಬ್ಬಾವುಗಳು ಸಿಕ್ಕಿಲ್ಲ. ಹಿಂದೆ ಇದೇ ರೀತಿ ತಪ್ಪಿಸಿಕೊಂಡು ಹೋಗಿದ್ದಾಗ ಇನ್ನೆಲ್ಲೋ ಇತ್ತಂತೆ, ಬಹಳ ಕಷ್ಟಪಟ್ಟು ಹಿಡಿದು ತೆಗೆದುಕೊಂಡು ಬಂದು ಬಿಟ್ಟರು ಎಂದು ಹೇಳಿದರು. ಈಗ ಎರಡು ಹೆಬ್ಬಾವುಗಳು ತಪ್ಪಿಸಿಕೊಂಡು ಹೋಗಿವೆ. ಅವು ಎಲ್ಲಿವೆ? ಅದರ ಬಗ್ಗೆ ತಾವು ಯಾವ ರೀತಿ ತನಿಖೆ ಮಾಡುತ್ತೀರಿ? ಹೆಬ್ಬಾವುಗಳನ್ನು ತರಿಸುವ ವ್ಯವಸ್ಥೆ ಏನು ಮಾಡಿದ್ದೀರಿ? ಈ ಬಗ್ಗೆ ತಾವು ನಮಗೆ ಸ್ಪಷ್ಟವಾಗಿ ಹೇಳಬೇಕು.

ಶ್ರೀ ಎಚ್.ವೈ. ಮೇಟಿ : ಮಾನ್ಯ ಅಧ್ಯಕ್ಷರೇ, ನಾನೇ ಸ್ವತಃ ಮೃಗಾಲಯಕ್ಕೆ ಭೇಟಿ ಕೊಟ್ಟು ಅಲ್ಲಿ ಎಲ್ಲಾ ಸಮಸ್ಯೆಗಳ ಬಗ್ಗೆಯೂ ಪೂರ್ತಿ ವಿಚಾರ ಮಾಡಿ ಸ್ಥಳೀಯ ಶಾಸಕರನ್ನು ನಾನು ಕರೆಯಿಸಿಕೊಂಡು ಹೋಗಿದ್ದೆ. ಮತ್ತು ಹಿಂದೆ ಎಂ.ಎಲ್.ಸಿ. ಆದಂಥ ರಾಮಣ್ಣನವರು ಸಹಾ ಆ ಮೃಗಾಲಯದ ಬಗ್ಗೆ ಕೆಲವು ವಿಚಾರಗಳನ್ನು ಹೇಳಿದರು. ಅವರನ್ನು ಕರೆಸಿಕೊಂಡು ಅವರ ಸಮಕ್ಷಮ ನಾನೆಲ್ಲ ವಿಚಾರ ಮಾಡಿದ್ದೇನೆ. ಅಲ್ಲಿಯ ಅಧಿಕಾರಿಗಳ ಮತ್ತು ನೌಕರರುಗಳಲ್ಲಿ ಸ್ವಲ್ಪ ಸಮಸ್ಯೆ ಇರುವುದರಿಂದ ಈ ಘಟನೆಗಳು ನಡೆದಿದೆ ಎಂದು ಕಂಡುಬಂತು. ಅದರ ಸಲುವಾಗಿ ಅವರಿಗೆ ಸರಿಯಾಗಿ ಇನ್ನು ಮುಂದೆ ಈ ರೀತಿ ಆಗದಂತೆ ನೋಡಿಕೊಳ್ಳುವುದಕ್ಕೆ ಹೇಳಿ ಅವರ ಕೆಲವು ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಅಧಿಕಾರಿಗಳಿಗೆ ನಾನು ತಿಳಿಸಿ ಅದನ್ನೆಲ್ಲ ಸರಿಪಡಿಸಿ ಬಂದಿದ್ದೇನೆ. ಇನ್ನು ಮುಂದೆ ಆ ರೀತಿ ಆಗದಂತೆ ನೋಡಿಕೊಳ್ಳುತ್ತೇವೆ. ಮತ್ತು ಏನು ಎರಡು ಹೆಬ್ಬಾವುಗಳು ಹೋಗಿವೆ ಎಂದು ಹೇಳಿದ್ದಾರೆ, ಅದು ನಿಜ. ಆದರೆ ಅವು ಹೊರಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ನಮ್ಮ ಮೃಗಾಲಯದಲ್ಲಿ ಹೊರಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಅಲ್ಲೇ ಎಲ್ಲೋ ಇರಬಹುದು ಎಂದು ಹೇಳಿ ಹುಡುಕುವುದಕ್ಕೆ ಹೇಳಿದ್ದೇವೆ. ಬಹುತೇಕ ನನ್ನ ಅಭಿಪ್ರಾಯದಲ್ಲಿ ಸಿಗುತ್ತವೆ ಎಂದು ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಹೆಬ್ಬಾವುಗಳು ಹೊರಗೆ ಹೋಗುವುದಕ್ಕೆ ಸಾಧ್ಯವಿಲ್ಲ. ಅಲ್ಲೆ ಎಲ್ಲೋ ಇರಬಹುದು ಎಂದು ಹೇಳಿದರೆ ಮೃಗಾಲಯ ಇರುವುದು ಎಷ್ಟು ಪ್ರದೇಶ? ನೀವು ಒಂಭತ್ತು ಗಂಟೆ ಅಲ್ಲಿದ್ದಿರಿ. ಮೃಗಾಲಯದಲ್ಲಿ ಒಂದು ಗಂಟೆ, ಎರಡು ಗಂಟೆ ಅಲ್ಲ, ಒಂಭತ್ತು ಗಂಟೆ ಇದ್ದಿರಿ. ತಾವೇನು ಹುಡುಕಲಿಲ್ಲವೋ?

ಶ್ರೀ ಎಚ್.ವೈ. ಮೇಟಿ : ಅಲ್ಲಿ 250 ಎಕರೆ ಪ್ರದೇಶ ಇದೆ. ಅವೇನಾದರೂ ಗಿಡ ಏನಾದರೂ ಹತ್ತಿದ್ದರೆ ಹೇಗೆ ಹುಡುಕುವುದು? ಸ್ವಲ್ಪ ಸಮಸ್ಯೆಯಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಹೆಬ್ಬಾವುಗಳು ಗಿಡ ಹತ್ತಿದೆ ಎಂದು ಹೇಳುತ್ತಾರೆ. ನಮ್ಮ ಅರಣ್ಯ ಸಚಿವರ ಪ್ರಕಾರ ಹೆಬ್ಬಾವುಗಳು ಗಿಡ ಹತ್ತಿವೆ ಎಂದು ಹೇಳುತ್ತಾರೆ; ಸಂತೋಷ. ನಿಮ್ಮವರು ಯಾರಾದರೂ ಗಿಡ ಹತ್ತಿ ನೋಡಿದರೋ?

ಶ್ರೀ ಹೆಚ್.ವೈ. ಮೇಟಿ : ನೋಡಿದ್ದಾರೆ, ಹುಡುಕಿದ್ದಾರೆ, ಇನ್ನೂ ಸಿಕ್ಕಿಲ್ಲ.

ಅಧ್ಯಕ್ಷರು : ಈ ಮಧ್ಯೆ ಚುನಾವಣೆಗಳು ಇದ್ದವಲ್ಲ ತಾಲ್ಲೂಕು ಪಂಚಾಯಿತಿ ಜಿಲ್ಲಾ ಪಂಚಾಯಿತಿಗಳದು, ಅಲ್ಲೆಲ್ಲೂ ಹೊರಟು ಹೋಗಿರುತ್ತವೆ ಪ್ರಚಾರ ಗಿಚಾರಕ್ಕೆ ಆ ಹೆಬ್ಬಾವುಗಳು.

ಶ್ರೀ ವಾಟಾಳ್ ನಾಗರಾಜ್ : ಅವರು ಒಪ್ಪುತ್ತಿಲ್ಲ. ಚುನಾವಣೆಗೆ ಹೋಗಿವೆ ಎಂದು ಹೇಳಿ ಒಪ್ಪಿಕೊಳ್ಳುತ್ತಿಲ್ಲ. ಅವರು ಹೇಳುವ ಪ್ರಕಾರ ಹೆಬ್ಬಾವುಗಳು ಹೊರಗಡೆ ಹೋಗೇ ಇಲ್ಲ. ಮೃಗಾಲಯದಲ್ಲೇ ಇವೆ. ಅವು ಒಳಗೇ ಇವೆ. ಎಲ್ಲೊ ಮರ ಹತ್ತಿರಬಹುದು ಎಂದು ಹೇಳುತ್ತಿದ್ದಾರೆ. ಮಾನ್ಯ ಸಚಿವರು ಒಂಭತ್ತು ಗಂಟೆ ಅಲ್ಲಿದ್ದರು.

ಯಾವುದಾದರೂ ಮರ ಹತ್ತಿ ನೀವೇನಾದರೂ ತನಿಖೆ ಮಾಡಿ ನೋಡಿದಿರಾ? ಅಥವಾ ನಿಮ್ಮ ಅಧಿಕಾರಿಗಳಾದರೂ/ ಅರಣ್ಯ ಇಲಾಖಾಧಿಕಾರಿಗಳು ಮರವನ್ನು ಹತ್ತಿದ್ದರೇ? ನೀವು ಹೆಬ್ಬಾವುಗಳನ್ನು ಹುಡುಕುವ ವ್ಯವಸ್ಥೆಯೇನು? ಹುಡುಕುವುದಕ್ಕೆ ಪೋಲೀಸ್ ವ್ಯವಸ್ಥೆಯನ್ನು ಮಾಡಿದ್ದೀರಾ? ಅಥವಾ ಅರಣ್ಯ ಇಲಾಖೆಗೆ ಕೊಟ್ಟರೆ ನನಗೆ ಅನುಮಾನ. ವೀರಪ್ಪನ್‌ನ್ನು ಹಿಡಿಯುವುದಕ್ಕೆ ಅವರ ಕೈಯಲ್ಲಿ ಆಗಲಿಲ್ಲ ಎಂದ ಮೇಲೆ ಇನ್ನು ಹೆಬ್ಬಾವುಗಳನ್ನು ಎಲ್ಲಿ ಅವರು ಹಿಡಿಯುತ್ತಾರೆ? ಅದು ಅನುಮಾನ ಇದೆ. ಆದ್ದರಿಂದ ತಾವು ದಯವಿಟ್ಟು ಸ್ಪಷ್ಟವಾಗಿ ಎಷ್ಟು ದಿವಸಗಳೊಳಗಾಗಿ ಹೆಬ್ಬಾವುಗಳನ್ನು ಹಿಡಿಯುತ್ತೀರಿ ಎಂದು ಈ ಸದನಕ್ಕೆ ಹೇಳಬೇಕು.

ಶ್ರೀ ಹೆಚ್.ವೈ. ಮೇಟಿ : ಆ ರೀತಿ ಹೇಳುವುದಕ್ಕಾಗುವುದಿಲ್ಲ, ಹುಡುಕುವುದಕ್ಕೆ ಎಲ್ಲಾ ತರಹದ ಪ್ರಯತ್ನವನ್ನು ಮಾಡಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಹೆಬ್ಬಾವುಗಳನ್ನು ಹಿಡಿಯುವುದಕ್ಕೆ ಯಾವ ಯಾವ ರೀತಿ ಪ್ರಯತ್ನವನ್ನು ಮಾಡಿದ್ದೀರಿ?

(ಗೊಂದಲ)

ಅಧ್ಯಕ್ಷರು : ಸನ್ಯಾಸ್ಯ ನಾಗರಾಜ್‌ರವರೇ, ತಾವು ಆ ಕಡೆಗೆ ತಿರುಗಿಕೊಂಡು ಅಷ್ಟು ಜೋರಾಗಿ ಕೇಳಿದರೆ ಅವರಿಗೆ ಏನಾಗುತ್ತದೆ ಎಂದರೆ ಸ್ವಲ್ಪ ತೊಂದರೆಯಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಇಲ್ಲ, ನಾನು ಮೇಟಿಯವರು ಬಹಳ ಸ್ನೇಹಿತರು. ಅವರಿಗೆ ತೊಂದರೆ ಕೊಡಬೇಕೆನ್ನುವುದು ನನ್ನ ಉದ್ದೇಶ ಅಲ್ಲ.

ಅಧ್ಯಕ್ಷರು : ನೀವು ನನ್ನ ಮಾತು ಕೇಳಿ ದಯಮಾಡಿ. ತಾವು ಈ ಕಡೆಗೆ ತಿರುಗಿಕೊಂಡುಬಿಡಿ. ಅವರು ಸ್ವಲ್ಪ ಸುಲಭದಲ್ಲಿ, ಉತ್ತರ ಹೇಳುತ್ತಾರೆ. ನೀವು ಹೀಗೆಲ್ಲ ಮಾಡಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ : ನಾನು ಪ್ರಾಮಾಣಿಕವಾಗಿ ಅವರನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕು ಎಂದಲ್ಲ, ಅವರು ಹೇಳುವ ಪ್ರಕಾರವೇ ಹೆಬ್ಬಾವುಗಳು.....

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ಅವರು ಹೇಳುವ ಪ್ರಕಾರ ಹೆಬ್ಬಾವುಗಳು ಕಳುವಾಗಿದೆ ಎಂದು ಒಪ್ಪಿಕೊಂಡಿದ್ದಾರೆ. ಮರ ಹತ್ತಿವೆ, ಗಿಡ ಹತ್ತಿವೆ ಎಂದು ಹೇಳಿಕೊಂಡು ಕಾಲ ಕಳೆಯುವುದು ಸರಿಯಲ್ಲ, ಅವರು ಅಲ್ಲಿಗೆ ಹೋಗಿ ಬಂದರೂ ಕೂಡ 250 ಎಕರೆ ಪ್ರದೇಶದಲ್ಲಿ ಎರಡು ಹೆಬ್ಬಾವುಗಳು ಎಲ್ಲಿವೆ ಎಂದು ಕಂಡು ಹಿಡಿಯುವುದಕ್ಕೆ ಆಗಾಲಿಲ್ಲ ಎಂದರೆ ಗಿಡ ಹತ್ತಿವೆ ಎಂದು ಹೇಳಿಕೊಂಡು ಕಾಲ ಕಳೆದರೆ ನಾವು ನಂಬುವುದಕ್ಕೆ ಆಗುತ್ತದಯೇ?

ಶ್ರೀ ಜಿ.ಹೆಚ್. ಪಟೀಲ್ (ಉಪ ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೇ, ಹೆಬ್ಬಾವುಗಳನ್ನು ಹುಡುಕುವ ಕೆಲಸ ಮಂತ್ರಿಗಳದಲ್ಲ, ನೀವೇ ಹೋಗುತ್ತೀರಾ? ಮರ ಹತ್ತಿ ನೋಡಿದ್ದೀರಾ ಎಂದು ಹೇಳಿದರು. ಮಾನ್ಯ ಸದಸ್ಯರು ಬೇಕಾದರೆ ಹೋಗಲಿ. ಮರ ಹತ್ತಿ ಅಲ್ಲೆಲ್ಲಾ ನೋಡಿಕೊಂಡು ಬರಲಿ. ಬೇಕಾದರೆ ಅವರಿಗೆ ಒಂದಿಷ್ಟು ಟೈಮ್ ಕೊಡುತ್ತೇವೆ. ಅವರಿಗೆಲ್ಲ ಅಸಿಸ್ಟೆನ್ಸ್ ಕೊಡುತ್ತೇವೆ. ಮಂತ್ರಿಗಳು ಹೆಬ್ಬಾವುಗಳನ್ನು ಹುಡುಕುತ್ತಾರೆಯೇ?

(ಗೊಂದಲ)

ಶ್ರೀ ಕಾಗೋಡು ತಿಮ್ಮಪ್ಪ : ನೀವು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಇಲ್ಲವೆಂದು ಹೇಳುವುದಿಲ್ಲ. ಅವರು ಹೋಗಿ ಹುಡುಕುವ ಕೆಲಸ ಅಲ್ಲ. ಆದರೆ ಅವರೇ ಅಲ್ಲಿ ಸ್ವತಃ ಭೇಟಿ ಮಾಡಿದ ಮೇಲೆ ಈ ವಿಷಯ ಅವರ ಗಮನಕ್ಕೆ ಬಂದ ಮೇಲೆ ಇಷ್ಟರೊಳಗಾಗಿ ಈ ತಪಾಸಣೆಯನ್ನು ಮಾಡತಕ್ಕ ಕೆಲಸ ಆಗಬೇಕಾಗಿತ್ತು. ಇನ್ನೂ ಆಗದೇ ಸುಮ್ಮನೇ ಗಿಡ ಹತ್ತಿದ್ದಾವೆ ಎಂದು ಹೇಳುತ್ತಾ ಕುಳಿತುಕೊಂಡರೆ ಹೇಗೆ?....

ಶ್ರೀ ಜಿ.ಎಚ್. ಪಟೇಲ್ : ಹುಡುಕುತ್ತಿದ್ದಾರೆ, ಇಷ್ಟೇ ದಿವಸದಲ್ಲಿ ಹುಡುಕುತ್ತೇವೆ ಎಂದು ಹೇಳುವುದಕ್ಕೆ ಬರುತ್ತದೆಯೇ?

ಶ್ರೀ ಕಾಗೋಡು ತಿಮ್ಮಪ್ಪ : ಹೆಬ್ಬಾವುಗಳು ಎಲ್ಲಿ ಹೋಗಿರುತ್ತಾವೆ?

ಶ್ರೀ ಜಿ.ಎಚ್. ಪಟೇಲ್ : ಅಲ್ಲಿ ಇದ್ದಾವೆ. ಈಗ ಸುಮಾರು 250-300 ಎಕರೆ ಪ್ರದೇಶ ಇದೆ. ಆ ಪ್ರದೇಶದಲ್ಲಿ ಅಷ್ಟು ಬೇಗ ಹುಡುಕುವುದಕ್ಕೆ ಆಗುತ್ತದೆಯೇ? ನೀವು ಸಹ ಅರಣ್ಯ ಮಂತ್ರಿಗಳು ಆಗಿದ್ದವರು.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ತಾವು ಅರಣ್ಯ ಮಂತ್ರಿ ಆಗಿದ್ದಾಗ ಹಾವುಗಳನ್ನು ಬೇರೆ ಕಡೆ ಕಳಿಸಿದ್ದಿರಾ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಕಾಗೋಡು ತಿಮ್ಮಪ್ಪನವರು ಅರಣ್ಯ ಮಂತ್ರಿ ಆಗಿದ್ದಾಗ ಹೆಬ್ಬಾವುಗಳು ಕಳವು ಆಗಿರಲಿಲ್ಲ. ಹಾವುಗಳು ಇದ್ದವೋ ಇಲ್ಲವೋ ಗೊತ್ತಿಲ್ಲ. ಆ ಪ್ರಶ್ನೆ ಬೇರೆ. ಮಾನ್ಯ ಉಪ ಮುಖ್ಯಮಂತ್ರಿಗಳು ಸಲಹೆ ಕೊಟ್ಟಿದ್ದಾರೆ. ತಾವೇ ಹುಡುಕಬೇಕು ಎಲ್ಲಾ ಸಿಬ್ಬಂದಿ ಕೊಡುತ್ತೇವೆಂದು ಹೇಳಿದ್ದಾರೆ. ಅವರನ್ನು ನಾನು ಕೇಳುತ್ತೇನೆ. ಸಿಬ್ಬಂದಿ ಕೊಡುತ್ತೇವೆಂದು ಹೇಳಿದ್ದಾರೆ. ಈಗಲೇ ನಾನು ಹೇಳುತ್ತೇನೆ, ನನಗೆ ಒಂದು ಸಾವಿರ ಜನ ಪೋಲೀಸರು ಬೇಕು. ನನ್ನ ಹಿಂದೆ ಮುಂದೆ ವ್ಯವಸ್ಥಿತವಾಗಿರತಕ್ಕ ಎರಡು ಸುಂದರವಾದ ಕಾರುಗಳು ಬೇಕು. ತಾವು ಈ ಸದನದಲ್ಲಿ ಒಪ್ಪಿದ್ದೀರಿ, ದಯಮಾಡಿ ನೀವು ಅದರ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಜಿ.ಹೆಚ್. ಪಟೇಲ್: ಎಲ್ಲಾ ವ್ಯವಸ್ಥೆ ಕೊಟ್ಟರೆ ಹಾವುಗಳನ್ನು ಹುಡುಕುವುದಕ್ಕೆ ಅಲ್ಲ.

ಅಧ್ಯಕ್ಷರು : ನಿಮ್ಮ - ಅವರ ಮಧ್ಯೆ ನನ್ನದೊಂದು ಸಮಸ್ಯೆ ಇದೆ. ಒಂದು ಗಂಟೆ ಮೀರಿ ಪ್ರಶ್ನೋತ್ತರ ಮಾಡುವುದು ಸರಿಯೇ. ಇನ್ನೂ ಬಹಳ ಮುಖ್ಯವಾದ ಪ್ರಶ್ನೆಗಳು ಇವೆ. ಸಮಯ ವೇಸ್ಟ್ ಆಗುವುದಿಲ್ಲವೇ?

ಶ್ರೀ ವಾಟಾಳ್ ನಾಗರಾಜ್ : ಇದು ಪ್ರಾಸಂಗಿಕವಾಗಿ ನಗುವಿನ ಅಲೆ ಬಂದರೂ ಇದರ ಹಿಂದೆ ಇರತಕ್ಕ ವಿಚಾರವನ್ನು ನಾವು ಗಂಭೀರವಾಗಿ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ನಾನು ವಿಷಯದ ಗಂಭೀರತೆಯನ್ನು ಅಲ್ಲಗಳೆಯುತ್ತಾ ಇಲ್ಲ. ದಯಮಾಡಿ ಸಮಯ ಗಮನಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಮುಗಿಸುತ್ತೇನೆ. ಮಾನ್ಯ ಅರಣ್ಯ ಸಚಿವರನ್ನು ನಾನು ಅಂತಿಮವಾಗಿ ಯಾವುದೇ ಇಕ್ಕಟ್ಟಿಗೆ ಸಿಕ್ಕಿಸಬೇಕು ಎನ್ನುವ ಉದ್ದೇಶ ಇಲ್ಲ. ಒಂದು ಮಾತು ಹೇಳುತ್ತೇನೆ. ಕನಿಷ್ಟ ಇಷ್ಟು ದಿವಸದೊಳಗೆ ಹೆಬ್ಬಾವುಗಳನ್ನು ಹಿಡಿಯುತ್ತೇವೆ ಎನ್ನತಕ್ಕ ಭರವಸೆಯನ್ನಾದರೂ ತಾವು ಈ ಸದನಕ್ಕೆ ಕೊಡಬೇಕು ಮತ್ತು ಮೃಗಾಲಯಗಳಲ್ಲಿ ಈ ರೀತಿ.

ಅಧ್ಯಕ್ಷರು : ನೀವು ಈ ಕಡೆ ತಿರುಗಿ ಮಾತನಾಡಿ.

ಶ್ರೀ ವಾಟಾಳ್ ನಾಗರಾಜ್ : ಮೃಗಾಲಯದಲ್ಲಿನ ಪ್ರಾಣಿಗಳಿಗೆ ತೊಂದರೆ ಆಗದೇ ಇರುವ ರೀತಿಯಲ್ಲಿ ಅವುಗಳು ಸಾಯದೇ ಇರತಕ್ಕ ರೀತಿಯಲ್ಲಿ ನೋಡತಕ್ಕ

ವ್ಯವಸ್ಥೆಯನ್ನು ಏನು ಮಾಡುತ್ತೀರಿ? ಇನ್ನು ಮುಂದಾದರೂ ಅದನ್ನು ತಡೆ ಹಿಡಿಯುವುದಕ್ಕೆ, ಸಂಪೂರ್ಣವಾಗಿ ಇದನ್ನು ನಿಲ್ಲಿಸುವುದಕ್ಕೆ ವ್ಯವಸ್ಥೆಯನ್ನು ತಾವು ಏನು ಮಾಡುತ್ತೀರಿ ಎಂದು ದಯಮಾಡಿ ತಿಳಿಸಿದರೆ ನನಗೆ ಸಂತೋಷ ಎನಿಸುತ್ತದೆ.

ಅಧ್ಯಕ್ಷರು : ಎಲ್ಲ ಸಲಹೆ ಸೂಚನೆಗಳನ್ನೂ ಗಮನದಲ್ಲಿಟ್ಟುಕೊಂಡು ಕೆಲಸ ಮಾಡುತ್ತೇವೆಂದು ಹೇಳಿ.

ಶ್ರೀ ಎ. ರಾಮದಾಸ್: ಸನ್ಮಾನ್ಯ ಅಧ್ಯಕ್ಷರೆ,....

ಅಧ್ಯಕ್ಷರು : ಮಾನ್ಯ ರಾಮದಾಸ್ ಅವರೇ, ತಾವು ಮೈಸೂರಿನ ಸದಸ್ಯರು, ತಮಗೆ ಉಪ ಪ್ರಶ್ನೆ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ. ಮಾನ್ಯ ಮಂತ್ರಿಗಳು ಉತ್ತರ ಹೇಳಲಿ.

ಶ್ರೀ ಹೆಚ್.ವೈ. ಮೇಟಿ : ಉನ್ನತ ಅಧಿಕಾರಿಗಳ ಒಂದು ಸಮಿತಿ ಮಾಡಿ ಎನ್‌ಕ್ವೈರಿ ಮಾಡಿಸಿ ಮುಂದೆ ಹೀಗೆ ಆಗದೇ ಇರುವ ಹಾಗೆ ನೋಡಿಕೊಳ್ಳುತ್ತೇನೆ. ಇಂತಿಷ್ಟೇ ದಿವಸದಲ್ಲಿ ಹುಡುಕುತ್ತೇವೆಂದು ಹೇಳುವುದಕ್ಕೆ ಆಗುವುದಿಲ್ಲ. ಅಲ್ಲಿ 240 ಎಕರೆ ಪ್ರದೇಶ ಇದೆ.

ಅಧ್ಯಕ್ಷರು : ಆದಷ್ಟು ಬೇಗ ಎಂದು ಹೇಳಿ.

ಶ್ರೀ ಹೆಚ್.ವೈ. ಮೇಟಿ : ಪ್ರಾಮಾಣಿಕ ಪ್ರಯತ್ನ ಮಾಡಿ ಅದನ್ನು ಹುಡುಕಿಸುತ್ತೇವೆ.

ಶ್ರಿ ಎ. ರಾಮದಾಸ್ : ಪ್ರಾಣಿಗಳ ಸಾವು ಮತ್ತು ಹೆಬ್ಬಾವುಗಳು ತಪ್ಪಿಸಿಕೊಂಡ ವಿಚಾರದಲ್ಲಲಿ ನಗೆಯ ಅಲೆಯಲ್ಲಿ ನಾವು ಇದ್ದರೂ ಕೂಡ ಮಾನ್ಯ ಸಚಿವರು ಉತ್ತರ ಕೊಟ್ಟಿರುವ ರೀತಿಯಲ್ಲಿ, ಆಡಳಿತದಲ್ಲಿ ಇರುವವರು ಮತ್ತು ನೌಕರರ ಮಧ್ಯೆ ಸಂಘರ್ಷ ಏನು ಇದೆ, ಅದರಿಂದ ಪ್ರಾಣಿಗಳು ಸತ್ತಿವೆ ಎನ್ನುವುದು ಎಲ್ಲರಿಗೂ ಗೊತ್ತಿರುವಂತಹ ವಿಚಾರ. ನಾವು ಮನುಷ್ಯ ಮನುಷ್ಯರ ಮಧ್ಯೆ ಇರುವಂತಹ ಕೇವಲ ಆಡಳಿತಾತ್ಮಕವಾದ ವಿಚಾರಕ್ಕೋಸ್ಕರ ಅಲ್ಲಿ ಇರುವಂತಹ ಪ್ರಾಣಿಗಳು ಏನು ಇದ್ದಾವೆ. ಅವುಗಳು ಸಾಯುತ್ತಾ ಇರುವಂತಹದನ್ನು ನಿಲ್ಲಿಸಲಿಕ್ಕೆ ಏನು ಕ್ರಮ ಆಗಿದೆ ಎಂದು ನಮಗೆ ಅಷ್ಟೇ ಬೇಕಾಗಿದೆ.

ಶ್ರೀ ಹೆಚ್.ವೈ. ಮೇಟಿ : ಈಗಾಗಲೇ ನಾವು ಭೇಟಿ ಕೊಟ್ಟು ಈಗಾಗಲೇ ಒಬ್ಬ ಉನ್ನತ ಅಧಿಕಾರಿಯನ್ನು ನೇಮಿಸಿ ಎನ್‌ಕ್ವೈರಿ ಮಾಡಿಸಿ ತಪ್ಪಿತಸ್ಥರ ಮೇಲೆ ಕ್ರಮ ತೆಗೆದುಕೊಂಡಿದ್ದೇವೆ. ಈಗಾಗಲೇ ಮೂರು ಮಂದಿಯನ್ನು ಸಸ್ಪೆಂಡ್ ಮಾಡಿದ್ದೇವೆ, ಉಳಿದವರ ಮೇಲೆ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಗುಲ್ಬರ್ಗಾ ರಾಯಚೂರು ಮತ್ತು ಬೀದರ್‌ನಲ್ಲಿ ಉರ್ದು ಶಿಕ್ಷಣ ಮಾಧ್ಯಮದ ಶಾಲೆಗಳು

227 - ಶ್ರೀ ಖಮರಲ್ಲಾ ಇಸ್ಲಾಂ (ಗುಲ್ಬರ್ಗಾ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗ, ಬೀದರ್, ರಾಯಚೂರು ಜಿಲ್ಲೆಗಳನ್ನು ಹೊರತುಪಡಿಸಿ ಕರ್ನಾಟಕ ಇತರೆ ಜಿಲ್ಲೆಗಳಲ್ಲಿ ಸರ್ಕಾರಿ ಉರ್ದು ಮಾಧ್ಯಮ ಪ್ರಾಥಮಿಕ ಶಾಲೆಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುತ್ತಿರುವುದು ನಿಜವೇ?

ಆ) ಹಾಗಿದ್ದಲ್ಲಿ, ಹೈದರಾಬಾದ್ ಕರ್ನಾಟಕದ ಪ್ರದೇಶದ ಈ ಮೂರು ಜಿಲ್ಲೆಗಳ ಸರ್ಕಾರಿ ಉರ್ದು ಮಾಧ್ಯಮ ಪ್ರಾಥಮಿಕ ಶಾಲೆಗಳು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಅವಕಾಶ ನೀಡದೆ ತಾರತಮ್ಯ ತೋರಿಸುತ್ತಿರುವುದಕ್ಕೆ ಕಾರಣಗಳೇನು?